ಓ ಎಸ್ ನಂ119/2019

**ಪಿ. ಡಬ್ಲ್ಯೂ ಃ 1**

**ದಿಃ 4.10.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃಪ್ರತಿವಾದಿ 1 ರವರ ಪರ ಶ್ರೀ ಎಸ್ ಜಿ ಆರ್ ವಕೀಲರಿಂದ ಃ**

ನಮ್ಮ ತಾಯಿ ಗಂಗಮ್ಮ ವಿದ್ಯಾಭ್ಯಾಸ ಮಾಡಿಲ್ಲ. ಸಹಿ ಮಾಡುವುದನ್ನು ಮಾತ್ರ ಕಲಿತಿದ್ದಾರೆ. ನಮ್ಮ ತಾಯಿಗೆ ಹುಷಾರಿರುವುದಿಲ್ಲ. ಅವರಿಗೆ ಬೆನ್ನುಮೂಳೆ ಅಪರೇಷನ್ ಆಗಿದೆ. ವಿಶೇಷ ಅಧಿಕಾರಪತ್ರದಲ್ಲಿ ನನ್ನ ತಾಯಿಗೆ ಬೆನ್ನುಮೂಳೆ ನೋವು ಇದ್ದ ಬಗ್ಗೆ ಬರೆಸಿಲ್ಲ. ನಮ್ಮ ತಾಯಿಗೆ ಬೆನ್ನು ನೋವು ಇಲ್ಲ ಮತ್ತು ಅಪರೇಷನ್ ಆಗಿಲ್ಲ ಎಂದರೆ ಸರಿಯಲ್ಲ. ದಾವೆ ಹಾಕಲು ನಮ್ಮ ವಕೀಲರಿಗೆ ನಮ್ಮ ತಾಯಿ ಮಾಹಿತಿ ಕೊಟ್ಟಿದ್ದಾರೆ. ಆ ಸಂದರ್ಭದಲ್ಲಿ ನಾನು ಸಹ ಲಾಯರ್ ಆಫೀಸ್ ಗೆ ಹೋಗಿದ್ದೇನು. 2017 ರಲ್ಲಿ ನಮ್ಮ ತಾಯಿ ಮತ್ತು ನಮ್ಮ ಚಿಕ್ಕಪ್ಪಂದಿರು ಒಟ್ಟು ಕುಟುಂಬದ ಸ್ವತ್ತುಗಳನ್ನು ಭಾಗ ಮಾಡಿಕೊಂಡಾಗ ದಾವಾ ಸ್ವತ್ತು ನಮ್ಮ ಭಾಗಕ್ಕೆ ಬಂದಿರುತ್ತದೆ. ಭಾಗ ಮಾಡಿಕೊಂಡ ದಿನಾಂಕ ನನಗೆ ಹೇಳಲಾಗುವುದಿಲ್ಲ. ಅದು ನೋಂದಾಯಿತ ವಿಭಾಗಪತ್ರದ ಮೂಲಕ ಆಗಿರುತ್ತದೆ. ಸದರಿ ನೋಂದಾಯಿತ ವಿಭಾಗಪತ್ರವನ್ನು ನ್ಯಾಯಾಲಯಕ್ಕೆ ಕೊಡಲು ಯಾವುದೆ ತೊಂದರೆ ಇಲ್ಲ.

ವಿಭಾಗಪತ್ರದಲ್ಲಿ ದಾವಾ ಸ್ವತ್ತು ಎಷ್ಟನೇ ಐಟಂ ಸ್ವತ್ತು ಎಂದು ಬರೆದಿದೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ ಃ 22.04.2017 ರಂದು ವಿಭಾಗಪತ್ರ ನೋಂದಣಿಯಾಗಿದೆ ಎಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ಸ.ನಂ. 67 ಇದು ಮೂಲತಃ ಚಿಕ್ಕ ಸೋಲೂರಿನ ಸಿ ಕೆ ಮಲ್ಲಯ್ಯ ಮತ್ತು ನಂಜಯ್ಯ ಮತ್ತು ಅವರ ವಂಶಸ್ಥರಿಗೆ ಸೇರಿದ ಸ್ವತ್ತು ಇರುತ್ತದೆ. ನಮ್ಮ ಜಮೀನಿನಲ್ಲಿರುವ ಚಿಕ್ಕಮರಗಳು 6-7 ವರ್ಷದ ಮರಗಳಿರುತ್ತವೆ, ದೊಡ್ಡ ಮರಗಳು 12 ವರ್ಷದ ಮರಗಳಿರುತ್ತವೆ. ದೊಡ್ಡಮರಗಳ ದಕ್ಷಿಣ ದಿಕ್ಕಿಗೆ ಇರುವ ಚಿಕ್ಕಮರಗಳನ್ನು ಒಂದೇ ಬಾರಿ 12 ಗುಂಟೆಯಲ್ಲಿ ಹಾಕಿದ್ದೇವೆ ಎಂದರೆ ಸರಿ. **ಸದರಿ ಫೋಟೋಗಳನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅವುಗಳನ್ನು ನಿ ಡಿ 1 ರಿಂದ ನಿ ಡಿ 3 ಎಂದು ಗುರುತಿಸಲಾಯಿತು. ಸಿ ಡಿ ಯನ್ನು ನಿ ಡಿ 4 ಎಂದು ಗುರುತಿಸಲಾಯಿತು.**

ಸ.ನಂ. 67 ಇದು ಚಿಕ್ಕ ಸೋಲೂರಿನ ಚಿಕ್ಕಣ್ಣ ಮತ್ತು ಅವರ ತಮ್ಮ ನಂಜಯ್ಯ ಇವರಿಗೆ ಸೇರಿದ್ದು ಎಂದರೆ ಸರಿ. ದಾವಾ ಹಾಕುವ 75 ವರ್ಷಗಳ ಮೊದಲು ಚಿಕ್ಕಣ್ಣ ಮತ್ತು ನಂಜಯ್ಯ

ಇವರು ಆ ಸ್ವತ್ತನ್ನು ಬಾಯಿಮಾತಿನ ವಿಭಾಗ ಮಾಡಿಕೊಂಡು ಅನುಭವಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಜಮೀನುಗಳನ್ನು ಅವರಿಬ್ಬರು ಫಲವತ್ತತೆ ಆಧಾರದ ಮೇಲೆ ಎರಡೆರಡು ತಾಕುಗಳಾಗಿ ಮಾಡಿಕೊಂಡು ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ಸರಿ. ಸ.ನಂ. 67 ರಲ್ಲಿ ದಕ್ಷಿಣದ ಕಡೆಗೆ 1 ಎಕರೆ 12 ಗುಂಟೆ ಚಿಕ್ಕಣ್ಣ ಇವರಿಗೆ 1 ನೇ ತಾಕು, ಅದರ ನಂತರ ಉತ್ತರದ ಕಡೆಗೆ 1 ಎಕರೆ 15 ಗುಂಟೆ ನಂಜಯ್ಯ ಇವರಿಗೆ 1 ನೇ ತಾಕು, ಅದರ ನಂತರ 22 ಗುಂಟೆ ಉತ್ತರಕ್ಕೆ 2 ನೇ ತಾಕು ನಂಜಯ್ಯ ನಿಗೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಅದರ ಉತ್ತರಕ್ಕೆ 28 ಗುಂಟೆ 2 ನೆ ತಾಕಾಗಿ ಚಿಕ್ಕಣ್ಣನಿಗೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ.ಈ ರೀತಿಯಾಗಿ ಅವರು ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ಚಿಕ್ಕಣ್ಣ ಇವರಿಗೆ ಬಂದ ಜಮೀನುಗಳನ್ನು ಅವರ ಜೀವಿತಾವಧಿಯಲ್ಲಿ ಅಳತೆ ಮಾಡಿಸಿಕೊಂಡಿದ್ದರೋ ಇಲ್ಲವೋ ಗೊತ್ತಿಲ್ಲ. ಅ ಬಗ್ಗೆ ನಾನು ಯಾವುದೆ ದಾಖಲಾತಿಯನ್ನು ನೋಡಿಲ್ಲ. ಅವರ ಮಗ ಸಿ ಕೆ ಮಲ್ಲಯ್ಯ ಇವರು ಅವರಿಗೆ ಬಂದ ಸ್ವತ್ತುಗಳನ್ನು ಅಳತೆ ಮಾಡಿಸಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಮ್ಮ ತಾತ ಕ್ರಯಕ್ಕೆ ತೆಗೆದುಕೊಳ್ಳುವ ಮೊದಲು ಸ,ನಂ. 67 ನ್ನು ಅಳತೆ ಮಾಡಿಸಿದ್ದರೋ ಇಲ್ಲವೋ ಗೊತ್ತಿಲ್ಲ. ಸ.ನಂ. 67 ಇದು ಯಾವಾಗ ಪೋಡಿಯಾಗಿದೆ ಎಂದು ನನಗೆ ಗೊತ್ತಿಲ್ಲ. ನಮ್ಮ ತಾತ ಕ್ರಯಕ್ಕೆ ತೆಗೆದುಕೊಂಡ ಸ್ವತ್ತಿನ ಬಗ್ಗೆ ಅವರ ಹೆಸರಿನಲ್ಲಿ ಮ್ಯುಟೇಷನ್ ಆಗಿದೆ. ಆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಸಾಕ್ಷಿ ಪುನಃ ಹೇಳುತ್ತಾರೆ ಆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಸಿ ಕೆ ಮಲ್ಲಯ್ಯ ಇವರು ನಮ್ಮ ತಾತನಿಗೆ ಕ್ರಯಕ್ಕೆ ಕೊಡುವ ಮೊದಲು ಅಳತೆ ಮಾಡಿಸಿದ ಬಗ್ಗೆ ದಾಖಲೆಯನ್ನು ಕೊಟ್ಟಿಲ್ಲ.

ವಿಭಾಗಪತ್ರದಂತೆ ನಮ್ಮ ತಾಯಿ ಹೆಸರಿನಲ್ಲಿ ಅಥವಾ ನಮ್ಮ ಹೆಸರಿನಲ್ಲಿ ದಾವಾ ಸ್ವತ್ತು ಖಾತೆಯಾಗಿಲ್ಲ. ದಾವಾ ಸ್ವತ್ತು ನಮ್ಮ ಸ್ವಾಧೀನದಲ್ಲಿದೆ ಎಂದು ತೋರಿಸಲು ಯಾವುದೆ ಸರ್ವೇ ನಕ್ಷೆಗಳನ್ನು ಹಾಕಿಲ್ಲ ಎಂದರೆ ಸರಿ. ಸ.ನಂ. 67/1 ರಲ್ಲಿ ಹಾಗೂ ಇತರೇ ಸ್ವತ್ತುಗಳಲ್ಲಿ 1 ನೇ ಪ್ರತಿವಾದಿಯು ತಾನು ಕ್ರಯಕ್ಕೆ ಪಡೆದ ಸ್ವತ್ತುಗಳಲ್ಲಿ ಒಂದೇ ವಯಸ್ಸಿನ ಮಾವಿನ ಮರಗಳನ್ನು ಬೆಳೆಸಿದ್ದಾರೆ ಎಂದರೆ ಸರಿ. ನಾವು ಮತ್ತು ಅವರು ಒಂದೇ ಸಮಯದಲ್ಲಿ ಮರಗಳನ್ನು ಬೆಳೆಸಿದ್ದೇವೆ ಎಂದು ಸಾಕ್ಷಿ ಹೇಳುತ್ತಾರೆ. ಮರಗಳನ್ನು ನಮ್ಮ ತಂದೆ ಬದುಕಿದ್ದಾಗ ನೆಟ್ಟಿದ್ದಾರೆ. ನಮ್ಮ ಜಮೀನಿನಲ್ಲಿ ಬಾದಾಮಿ ಮಾವಿನ ಮರಗಳು 20 ರಿಂದ 25 ಇರುತ್ತವೆ. ಖಚಿತವಾಗಿ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಆ ಮರಗಳನ್ನು 1 ನೆ ಪ್ರತಿವಾದಿ ಬೆಳೆಸಿದ್ದರಿಂದ ಅವುಗಳು ಎಷ್ಟಿವೆ ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ವಿಭಾಗಪತ್ರದಲ್ಲಿ ಮರಗಳ ಬಗ್ಗೆ ಯಾವುದೆ ಮಾಹಿತಿ ಬರೆದಿರುವುದಿಲ್ಲ. ಆ ಮರಗಳನ್ನು 1 ನೇ

ಪ್ರತಿವಾದಿ ನೆಟ್ಟಿದ್ದರಿಂದ ವಿಭಾಗಪತ್ರದಲ್ಲಿ ಆ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ನಮ್ಮದೇ ಆಗಿದ್ದರೆ ವಿಭಾಗಪತ್ರದಲ್ಲಿ ಅವುಗಳನ್ನು ಬರೆಯಿಸುತ್ತಿದ್ದೇವು ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಪಹಣಿಗಳು ನಮ್ಮ ತಾಯಿ ಹೆಸರಿನಲ್ಲಿ ಬಂದಿಲ್ಲ. ಇನ್ನು ಜಂಟಿಯಾಗಿವೆ ಎಂದು ಸಾಕ್ಷಿ ಹೇಳುತ್ತಾರೆ. ದಾವಾಸ್ವತ್ತನ್ನು ಅಳತೆ ಮಾಡಿಸುವ ಮೊದಲು ಅಕ್ಕ ಪಕ್ಕದವರಿಗೆ ನೋಟೀಸ್ ಕೊಟ್ಟಿದ್ದೇವೆ. ಅವರಿಗೆ ಜಾರಿಯಾದ ಬಗ್ಗೆ ನಾನು ಯಾವುದೆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಅವುಗಳನ್ನು ಸಿಕ್ಕಿದರೆ ತಂದುಕೊಡುತ್ತೇನೆ. ನಾವು ಅಕ್ಕ ಪಕ್ಕದ ಜಮೀನಿನವರಿಗೆ ನೋಟೀಸ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ಆ ನೋಟೀಸ್ ಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 2017 ರಲ್ಲಿ ಪ್ರತಿವಾದಿಗಳು ಒತ್ತುವರಿ ಮಾಡಿಕೊಂಡಿದ್ದಾರೆ, ಖಚಿತವಾದ ದಿನಾಂಕ ಹೇಳಲಾಗುವುದಿಲ್ಲ. ಆ ಬಗ್ಗೆ ಪೊಲೀಸರಿಗೆ ದೂರು ಕೊಟ್ಟಿಲ್ಲ, ಆದರೆ ಠಾಣೆಯವರೆಗೆ ಹೋಗಿದ್ದೇವು ಎಂದು ಸಾಕ್ಷಿ ಹೇಳುತ್ತಾರೆ. ಪ್ರತಿವಾದಿ 1 ರವರು 1 ಎಕರೆ 4 ಗುಂಟೆ ಮತ್ತು 11 ಗುಂಟೆಯನ್ನು 2 ಬಾರಿ ಕ್ರಯಕ್ಕೆ ಪಡೆದಿದ್ದಾರೆ. ಅವುಗಳು ನೋಂದಾಯಿತ ಕ್ರಯಪತ್ರದ ಮೂಲಕ ಬಂದಿವೆ ಎಂದರೆ ಸರಿ. ನಿ ಪಿ 7 ರಲ್ಲಿ 1ನೇ ಪ್ರತಿವಾದಿ 1 ಎಕರೆ 4 ಗುಂಟೆ ಮತ್ತು 11 ಗುಂಟೆಯಲ್ಲಿ ಸ್ವಾಧೀನದಲ್ಲಿದ್ದಾರೆ ಎಂದು ಬರೆದಿದ್ದಾರೆ ಎಂದರೆ ಸರಿ. ಅದರಲ್ಲಿ ಒತ್ತುವರಿಯಾಗಿದೆ ಎಂದು ಬರೆದಿದೆ ಎಂದು ಸಾಕ್ಷಿ ಹೇಳುತ್ತಾರೆ.

ನಿ ಪಿ 7 ರಲ್ಲಿ ಒತ್ತುವರಿ ಆದ ಬಗ್ಗೆ ಬರೆದಿಲ್ಲ ಎಂದರೆ ಸರಿ. ಕಾಲಂ ನಲ್ಲಿ ಬರೆದಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ನಿ ಪಿ 7 ರಲ್ಲಿ 1ನೇ ಪ್ರತಿವಾದಿಯು ಸಹ

12 ಗುಂಟೆ ಜಮೀನಿನಲ್ಲಿ ಕಡಿಮೆ ಸ್ವಾಧೀನದಲ್ಲಿದ್ದಾರೆ ಎಂದು ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ಅದರಲ್ಲಿ ನಮಗೂ ಸಹ 28 ಗುಂಟೆ ಕಮ್ಮಿ ಸ್ವಾಧೀನದಲ್ಲಿ ಇದ್ದಾರೆ ಎಂದು ಬರೆದಿದ್ದಾರೆ ಎಂದರೆ ಸರಿ. ನಿ ಪಿ 7 ರಲ್ಲಿ ಯಾರು ಎಷ್ಟು ಸ್ವತ್ತಿನಲ್ಲಿ ಮತ್ತು ಯಾವ ದಿಕ್ಕಿನಲ್ಲಿ ಎಂದು ಬರೆದಿಲ್ಲ ಮತ್ತು ಸ್ಕೆಚ್ ಮಾಡಿಲ್ಲ ಎಂದರೆ ಸರಿ. ಚಿಕ್ಕಣ್ಣ ಇವರಿಗೆ ಬಂದ ಸ.ನಂ. 67 ರ ಉತ್ತರ ದಿಕ್ಕಿನ 28 ಗುಂಟೆ ಸ್ವತ್ತಿನಲ್ಲಿ ಲಕ್ಷ್ಮೀಕಾಂತಯ್ಯ , ರಾಜು ಹಾಗೂ ಇತರರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ಒತ್ತುವರಿ ಆಗಿದ್ದರೆ ನಾವು ಅವರಿಂದ ಪಡೆಯಬೇಕೆಂದರೆ ಸರಿಯಲ್ಲ. 1ನೇ ಪ್ರತಿವಾದಿಯು ಯಾವುದೆ ಒತ್ತುವರಿ ಮಾಡಿಲ್ಲದ ಕಾರಣ ಅವರಿಂದ ಸ್ವಾಧೀನ ತೆಗೆದುಕೊಳ್ಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಾತನಿಗೆ ಆದ ಕ್ರಯಪತ್ರದ ಪ್ರಕಾರ ನಾವು, ನಮ್ಮ ಚಿಕ್ಕಪ್ಪಂದಿರು ಹಾಗೂ ಬಸವರಾಜಯ್ಯ ಇವರ ಹೆಂಡತಿ ಮಕ್ಕಳು ಇವರು ವಾರಸುದಾರರಿರುತ್ತೇವೆ ಎಂದರೆ ಸರಿ. ನಾನು ಹೇಳಿಕೊಂಡಂತೆ ಯಾವುದೆ ವಿಭಾಗಪತ್ರ ಆಗಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಮ್ಮ ತಾಯಿಗೆ

ಬಂದಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿ ಒಬ್ಬರೇ ದಾವಾ ಸ್ವತ್ತಿಗೆ ಹಕ್ಕುದಾರರಲ್ಲ ಮತ್ತು ಮಾಲೀಕರಲ್ಲ ಎಂದರೆ ಸರಿಯಲ್ಲ, ನಾವು ಒಂದು ಸುಳ್ಳು ದಾವೆ ಮಾಡಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಎಸ್ ಜಿ ಆರ್ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**